ಪ್ರಜಾವಾಣಿ

## ಬ್ಯಾಸ್ಕೆಟ್‌ಬಾಲ್: ಜೈನ್ ವಿವಿಗೆ ಪ್ರಶಸ್ತಿ

ಬೆಂಗಳೂರು: ಜೈನ್ ವಿಶ್ವ ವಿದ್ಯಾನಿಲಯದ ಮಹಿಳಾ ತಂಡದವರು ತಮಿಳುನಾಡಿನ ವೆಲ್ಲೂರಿನ ಕ್ರಿಶ್ಚಿಯನ್ ವೈದ್ಯಕೀಯ ಕಾಲೇಜಿನ ಆಶ್ರಯದಲ್ಲಿ ನಡೆದ ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿ ಯಲ್ಲಿ ಪ್ರಶಸ್ತಿ ಗೆದ್ದಿದ್ದಾರೆ.

ಫೈನಲ್ ನಲ್ಲಿ ಜೈನ್ ವಿಶ್ವವಿದ್ಯಾನಿಲಯ ತಂಡದ ಆಟಗಾರ್ತಿಯರು 62–47 ರಲ್ಲಿ ಚೆನ್ನೈನ ಎಂ.ಒ.ಪಿ ವೈಷ್ಣವ್ ಕಾಲೇಜು ತಂಡವನ್ನು ನಿರಾಯಾಸ ವಾಗಿ ಸೋಲಿಸಿದರು. ಜೈನ್ ವಿವಿಯ ಮಧುರವಾಣಿ 22ಪಾಯಿಂಟ್ಸ್ ಗಳಿಸಿದರು.